ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—(ಕಾನೂನು ಮಂತ್ರಿಗಳು) ೧೯೮೮ನೇ ಇಸವಿಯ ಭೂಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು —ಪ್ರಸ್ತಾವ ಏನೆಂದರೆ "೧೯೮೮ನೇ ಇಸವಿಯ ಭೂಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

1988ನೇ ಕರ್ನಾಟಕ ಕಾನೂನು ನೆರವು ಮಂಡಲಿ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ೧೯೮೮ನೇ ಇಸವಿಯ ಕರ್ನಾಟಕ ಕಾನೂನು ನೆರವು ಮಂಡಲಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಮಾತನಾಡುವಾಗ ಲೀಗಲ್ ಏಯ್ಡ್ ಬೋರ್ಡ್‌ಗೆ ಅಗ್ರಿಕಲ್ಚರ್ ಲೇಬರ್‌ನ ಒಂದು ರೆಪ್ರೆಸೆಂಟೇಷನ್‌ನ್ನು ಕೊಡಬೇಕು, ಇದಕ್ಕೆ ಈ ತಿದ್ದುಪಡಿಯನ್ನು ವ್ಯವಸ್ಥೆ ಮಾಡಬೇಕೆಂದು ಕೇಳಿದ್ದರು ಅವರು ಹೇಳಿದ್ದನ್ನು ನಾನು ಒಪ್ಪಿಕೊಂಡಿದ್ದೆ. ಆದರ ಪ್ರಕಾರ ಇದರಲ್ಲಿ ನಾನು ತಿದ್ದುಪಡಿ ಮಾಡುತ್ತಿದ್ದೇನೆ. ೯ ಜನ ಎಂದು ಈ ಸಮಿತಿಗೆ ಏನು ನಿಗದಿ ಮಾಡಿದೆ ಅದಕ್ಕೆ ಇನ್ನೂ ಒಂದನ್ನು ಸೇರಿಸಿ ೧೦ ಜನ ಇರಬೇಕೆಂದು ಮಾಡಬೇಕಾಗಿದೆ. ಆದ್ದರಿಂದ ಈ ಅಗ್ರಿಕಲ್ಚರ್ ಲೇಬರರ್ ರೆಪ್ರೆಸೆಂಟೇಷನ್‌ನ್ನು ಈ ಸಮಿತಿಯಲ್ಲಿ ಸೇರಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇನೆ. ಇದಕ್ಕೆ ತಾವು ಅನುಮತಿ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರಲ್ಲಿ ಫೈನಾನ್ಷಿಯಲ್ ಕಮಿಟ್‌ಮೆಂಟ್ ಏನೂ ಇಲ್ಲವಾದ್ದರಿಂದ ಇದನ್ನು ಮಾಡಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ನಾನು ಅಭಿನಂದಿಸುತ್ತೇನೆ ಈ ಲೀಗಲ್ ಏಯ್ಡ್ ಬೋರ್ಡನ್ನು ಕಾನ್‌ಸ್ಟಿಟ್ಯೂಟ್ ಮಾಡಿರತಕ್ಕದ್ದು ಮೂಲಭೂತವಾಗಿ ಬಡವರಿಗೆ ಅಗ್ರಿಕಲ್ಚರ್ ಲೇಬರರ್ಸ್‌ಗೆ ಕಾನೂನಿನ ನೆರವು ಸಿಕ್ಕಬೇಕೆಂದು ಉದ್ದೇಶ ಇಟ್ಟುಕೊಂಡು ಮಾಡಿರತಕ್ಕದ್ದು. ಸರ್ಕಾರದವರು ಇದರ ಬಗ್ಗೆ ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದಾರೆ, ಇದರ ಬಗ್ಗೆ ಒಂದು ಪುಸ್ತಕವನ್ನೂ ಕೂಡ ಹೊರಡಿಸಿದ್ದಾರೆ. ಅದನ್ನು ನಾನು ನೋಡಿದ್ದೇನೆ. ಅದು ಕಾರ್ಯರೂಪಕ್ಕೆ ಬರಬೇಕು ಆದರೆ ನನಗೆ ತಿಳಿದಂತೆ ಅದು ಕಾರ್ಯರೂಪಕ್ಕೆ ಬರುತ್ತಿಲ್ಲ. ಇದಕ್ಕೆ ಒಂದು ಪ್ರಮುಖ ಕಾರಣವೇನೆಂದರೆ ಈ ಕಾನೂನು ನೆರವು ಮಂಡಲಿಯಿಂದ ಬಡವರಿಗೆ ಏನೇನು ಅನುಕೂಲಗಳನ್ನು ಮಾಡಬೇಕೆಂದಿದೆ, ಏನೇನು ಕೆಲಸಕಾರ್ಯಗಳನ್ನು ಇದು ಮಾಡುತ್ತಿದೆ ಎನ್ನುವ ಬಗ್ಗೆ ಜನರಿಗೆ ತಿಳಿಯುವಂತೆ ಮಾಡಲು ಇರತಕ್ಕ ಪ್ರಚಾರ ಬಹಳ ಕಡಿಮೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಾನೂ ಮತ್ತು ನನ್ನ ಇನ್ನೂ ಕೆಲವು ಸ್ನೇಹಿತರು ರಾಜ್ಯದಲ್ಲಿ ಹಲವಾರು ಕಡೆಗಳಲ್ಲಿ ಸಂಚರಿಸುತ್ತಿರುವಾಗ ಇದನ್ನು ಗಮನಿಸಿದ್ದೇವೆ. ಇದರ ಬಗ್ಗೆ ಪ್ರಚಾರ ಬಹಳ ಕಡಿಮೆ ಇರುವುದರಿಂದ ಹೆಚ್ಚಿನ ಪ್ರಚಾರಕಾರ್ಯವನ್ನು ಕೈಗೊಳ್ಳಬೇಕು ಮುಖ್ಯವಾಗಿ ಈ ಕಾನೂನು ನೆರವು ಮಂಡಲಿಯಲ್ಲಿ ಅಗ್ರಿಕಲ್ಚರ್ ಲೇಬರರ್‌ಗೆ ಒಂದು ಪ್ರಾತಿನಿಧ್ಯ ಇರಬೇಕೆಂದು ಕೇಳಿಕೊಂಡಿದ್ದೆ. ಅದರಂತೆ ತಾವು ಮಾಡಿದ್ದೀರಿ ಆದ್ದರಿಂದ ತಪ್ಪಾಗೆ ಅಭಿನಂದಿಸಿ, ಈ ತಿದ್ದುಪಡಿಯನ್ನು ಸ್ವಾಗತಿಸುತ್ತೇನೆ.

† ಶ್ರೀ ಬಿ. ಎಸ್. ಯೆಡಿಯೂರಪ್ಪ (ಶಿಕಾರಿಪುರ).— ಮಾನ್ಯ ಅಧ್ಯಕ್ಷರೆ, ತುಂಬಾ ಸಂಲಭವಾಗಿ ಮಾನ್ಯ ಲಕ್ಷ್ಮೀಸಾಗರ್‌ರವರು ಮಾತನಾಡಿ ಮಾನ್ಯ ಕೃಷ್ಣನ್‌ರವರಿಂ ಹೇಳಿದ್ದನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ನಿಜವಾಗಿಯೂ ಈ ಕಾನೂನು ನೆರವು ಮಂಡಲಿಯಲ್ಲಿ ಕೃಷಿ ಕಾರ್ಮಿಕ ಸದಸ್ಯನಾಗಿ ಬಡವರಿಗೆ ನೆರವು. ನ್ಯಾಯ ಸಿಕ್ಕುವಂತೆ ನೋಡಿಕೊಳ್ಳಬೇಕು. ಅವರ ಸಮಸ್ಯೆಗಳು ಬಹಳವಾಗಿ ಇರುತ್ತವೆ ಎಂಬುದು ತಮ್ಮ ಉದ್ದೇಶವಾಗಿದ್ದರೆ ಬಹಳ ಒಳ್ಳೆಯದು ಆದರೆ ನೀವು ಇದನ್ನು ನಿಮ್ಮ ರಾಜಕೀಯ ಅನುಕೂಲಕ್ಕಾಗಿ ಎಲ್ಲಿ ಮಾಡಿಕೊಂಡಿದ್ದೀರೋ ಎನ್ನುತಕ್ಕ ಒಂದು ಭಯ ಅನುಮಾನ ಇದೆ. ಆದರೆ ಇಲ್ಲಿ ಅಗ್ರಿಕಲ್ಚರ್ ಲೇಬರರ್‌ಗೆ ಪ್ರಾತಿನಿಧ್ಯವನ್ನು ಕೊಡುವಾಗ ಹಿಂದುಳಿದ ವರ್ಗದವರಿಗೆ ಕೊಡುತ್ತೀರೋ, ಅಥವಾ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಕೊಡುತ್ತೀರೋ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕಾಗಿತ್ತು. ಆರೀತಿ ಹೇಳಿದ್ದಿದ್ದರೆ ನಿಜವಾಗಿ ನಿಮ್ಮ ಉದ್ದೇಶ ಬಡವನಿಗೆ ಸಹಾಯ ಮಾಡಬೇಕೆಂಬುದು ಇದೆಯೆಂದು ನಮಗೆ ಸ್ಪಷ್ಟವಾಗಿ ತಿಳಿಯುತ್ತಿತ್ತು. ತಾವು ಅಗ್ರಿಕಲ್ಚರ್ ಲೇಬರರ್‌ನ್ನು ಇದರಲ್ಲಿ ಸದಸ್ಯರನ್ನಾಗಿ ಮಾಡುತ್ತೀರಿ ನಿಜ ಆದರೆ ಈ ರೀತಿ ಸದಸ್ಯರನ್ನಾಗಿ ಮಾಡುವವರು ಯಾರು ? ನೀವು ನಿಮ್ಮ ಹಿಡಿತದಲ್ಲಿ, ಸರ್ಕಾರದ ಹಿಡಿತದಲ್ಲಿರತಕ್ಕ ಪತ್ರು ನಿಮಗೆ ಅನುಕೂಲಸಿಂಧುವಾಗಿ ನಡೆದುಕೊಳ್ಳತಕ್ಕ ಯಾರೋ ಒಬ್ಬನನ್ನು ಸದಸ್ಯನನ್ನಾಗಿ ಮಾಡುತ್ತೀರಿ. ಆದರೆ ಮಾಪ ಜನಾಂಗದಿಂದ ಅವನು ಬರಬೇಕೆಂಬ ಉದ್ದೇಶ ಇದರಲ್ಲಿ ಸ್ಪಷ್ಟವಾಗಿಲ್ಲದಿದ್ದರೆ ಅಗ್ರಿಕಲ್ಚರ್ ಲೇಬರರ್‌ನ ಹೆಸರಿನಲ್ಲಿ ನಿಮಗೆ ತಾಳ ಹಾಕಂಥ ವ್ಯಕ್ತಿಯನ್ನು ತರುವುದಕ್ಕೆ ಅವಕಾಶವಾಗಬಹುದು. ಆದ್ದರಿಂದ ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ದಯವಿಟ್ಟು ಇದನ್ನು ಕೆಲವು ದಿವಸ ಮುಂದಕ್ಕೆ ಹಾಕಿ. ಬ್ಯಾಕ್‌ವರ್ಡ್ ಕ್ಲಾಸ್‌ನವರ ಬಗ್ಗೆ ಅಥವಾ ಹರಿಜನ ಗಿರಿಜನರ ಬಗ್ಗೆ ಭಾಷಣವನ್ನು ಮಾಡತಕ್ಕ ನೀವು ಈ ಸದಸ್ಯತ್ವವನ್ನು ಸೇರಿಸುವಾಗ ಆತನು ಎಸ್.ಸಿ. ಅಥವಾ ಎಸ್ ಟಿ.ಗೆ ಸೇರಿರಬೇಕೆಂದು ಮಾಡಬೇಕು. ಇದರಿಂದ ನಿಮ್ಮ ಉದ್ದೇಶ ಸಫಲವಾಗುತ್ತದೆ.

ಇನ್ನು ಎರಡನೆಯದಾಗಿ ಲೀಗಲ್ ಏಯ್ಡ್ ಕೊಡಬೇಕೆಂದು ಏನು ವ್ಯವಸ್ಥೆ ಮಾಡುತ್ತಿದ್ದೀರಿ ಇಲ್ಲಿಯೂ ಕೂಡ ಬಡವನಿಗೆ ಅನುಕೂಲವಾಗುತ್ತದೆಂದೂ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಬಡವನಿಗೆ ಅನುಕೂಲವಾಗತಕ್ಕ ಕೇಸುಗಳಲ್ಲೂ ಕೂಡ ಬಹಳಷ್ಟು ಅಡ್ವೋಕೇಟ್‌ಗಳು ಸರಿಯಾಗಿ ವಾದ ಮಾಡುವುದಕ್ಕೆ ಹೋಗುವುದಿಲ್ಲ. ಆ ಬಡವನು ಬಂದು ಈ ಅಡ್ವೋಕೇಟ್‌ನ್ನು ಕಂಡು ಅವನಿಗೆ ದುಡ್ಡು ಕೊಟ್ಟು ಸರಿಮಾಡಿಕೊಂಡು ಹೋಗದಿದ್ದರೆ ಸಾಧ್ಯವೇ ಇಲ್ಲ ಇದು ತಮಗೂ ಕೂಡ ಗೊತ್ತಿರತಕ್ಕ ಕಹಿ ಅನುಭವ. ಆದ್ದರಿಂದ ಈ ರೀತಿ ಆಗದಂತೆ ಯಾರು ಕೇಸನ್ನು ಎಕ್ಸಾಮಿನ್ ಮಾಡಿ ನಿಜವಾಗಿ ಅವನಿಗೆ ಲೀಗಲ್ ಏಯ್ಡ್ ಸಿಕ್ಕಿದೆ ಎಂಬುದನ್ನು ಪರಿಶೀಲಿಸಿ Agricultural labourer belonging to SC/ST or any Backward community ಎಸ್.ಸಿ. ಎಸ್. ಅಂತ ಸ್ಪಷ್ಟವಾಗಿದ್ದರೆ ಆಗ ಮಾತ್ರ ನಿಜವಾಗಿ ಬಡವನಿಗೆ ಪ್ರಾತಿನಿಧ್ಯ ಸಿಕ್ಕು, ನಿಮ್ಮ ಉದ್ದೇಶ ಸಫಲವಾಗುತ್ತದೆ. ಇಲ್ಲದಿದ್ದರೆ ನಿಮಗೆ ಅನುಕೂಲವಾಗುವಂಥ ರೀತಿಯಲ್ಲಿ ಯಾರೋ ಒಬ್ಬರನ್ನು ಅಲ್ಲಿ ತಗೆದುಕೊಂಡು ಹೋಗಿ ಹಾಕಿ ನಾವು ಅಗ್ರಿಕಲ್ಚರ್ ಲೇಬರ್‌ಗೆ ಅನುಕೂಲ ಮಾಡಿಕೊಟ್ಟಿದ್ದೇವೆಂದು ಹೇಳಿಕೊಳ್ಳಬಹುದಷ್ಟೆ. ನೀವು ಚುನಾವಣೆಯ ಹಿನ್ನೆಲೆಯನ್ನು ಇಟ್ಟುಕೊಂಡು ಈ ರೀತಿ ಮಾಡಿದ್ದೀರೇನೊ ಎಂಬ ಭಯ, ಅನುಮಾನ ನಮಗೆ ಇದೆ. ಆದ್ದರಿಂದ ನಾನು ಹೇಳಿದ ಶಬ್ದವನ್ನು ಇದರಲ್ಲಿ ಸೇರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಹೇಳಿದರು ಲೀಗಲ್ ಏಯ್ಡ್ ಬೋರ್ಡ್‌ನ ಬಗ್ಗೆ ಪ್ರಚಾರ ಕಡಿಮೆ ಎಂದೂ, ಸಾಮಾನ್ಯವಾಗಿ ಕೋರ್ಟುಗಳಿಗೆ ಸಂಬಂಧಪಟ್ಟ ಕೇಸುಗಳಿದ್ದರೆ ವಕೀಲರನ್ನು ಹುಡುಕಿಕೊಂಡು ಹೋಗುತ್ತಾರೆ. ಆರೋಗ್ಯ ಕೇಂದ್ರಗಳಿಗೆ ಡಾಕ್ಟರುಗಳನ್ನು ಜನರು ಹುಡುಕಿಕೊಂಡು ಹೋಗುತ್ತಾರೆ. ಸಾಮಾನ್ಯವಾದ ಅರ್ಥದಲ್ಲಿ ಹೇಳುವುದಾದರೆ ಇದರ ಬಗ್ಗೆ ಪ್ರಚಾರ ಇನ್ನೂ ಆಗಬೇಕು. ಜನರಿಗೆ ಉಚಿತ ಕಾನೂನು ನೆರವು ಸಿಕ್ಕಬೇಕೆಂಬ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೂ ಸಾಕಷ್ಟು ಸಿಕ್ಕಿದೆ. ಇದಕ್ಕೆ ಬೇಕಾದರೆ ತಮಗೆ ವಿವರಗಳನ್ನು ಕೊಡುವುದಕ್ಕೆ ನಾನು ಸಿದ್ಧವಾಗಿದ್ದೇನೆ. ಆದರೆ ಈ ಸಂದರ್ಭದಲ್ಲಿ ಅದು ಬೇಡ. ಆದರೂ ತಮ್ಮ ಸಲಹೆಯನ್ನು ನಾನು ಒಪ್ಪಿಕೊಳ್ಳುತ್ತೇನೆ.

ಸಕ್ರೀಯವಾದ ಅರ್ಥದಲ್ಲಿ ಹೆಚ್ಚು ಪ್ರಚಾರವಾಗಬೇಕು. ಜನರಿಗೆ ಉಚಿತ ಕಾನೂನಿನ ನೆರವು ನೀತಿಯ ಬಗ್ಗೆ ತಿಳುವಳಿಕೆಯಾಗಬೇಕು ಎಂದು ಹೇಳುವ ನಿಮ್ಮ ಸಲಹೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಏನು ನಡೆಯುತ್ತಿದೆ ಎಂದರೆ ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ತಪ್ಪುಗಳಿಂದಾಗಿ ಉಚಿತವಾಗಿ ಕಾನೂನನ್ನು ಕೊಡುತ್ತೇವೆಂದು ಹೇಳಿದರೂ ಅದರ ಉಪಯೋಗ ಪಡೆದುಕೊಳ್ಳುವುದಕ್ಕೆ ಜನರ ಮನಸ್ಸನ್ನು ಒಲಿಸುವುದಕ್ಕೆ ಸ್ವಲ್ಪ ಕಷ್ಟಸಾಧ್ಯ. ಆದರೂ ಅದನ್ನು ಮಾಡೋಣ. ಅದಕ್ಕೆ ಶಮ್ಮೆಲ್ಲರ ಸಹಾಯ ಇರಲಿ ಎಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಯಡಿಯೂರಪ್ಪನವರ ವಾದ ಬಹಳ ಕಷ್ಟ. ಅವರು ಕೊಟ್ಟರೆ ಶಾಪ, ಬಿಟ್ಟರೆ ಬಾಣ ಎಂಬಂತೆ ಅವರ ಮಾತಿನ ಚಕಮುಖಿ ಇರುತ್ತದೆ. ತಾವು ಮಾತನಾಡುತ್ತಾ ಮಾನ್ಯ ಕೃಷ್ಣನ್‌ರವರಿಗೆ ಸಹಾಯ ಮಾಡಬೇಕೆಂದು ಹೇಳಿ ಎನ್ನುವ ಅರ್ಥ ಬರುವಂತೆ ಹೇಳಿದರು. ನಾನು ಅವರ ಮನೆಗಾಗಲಿ ಅಥವಾ ಮಾನ್ಯ ಭೂಪತಿಯವರ ಮನೆಗಾಗಲಿ ಹೋಗುವಂಥ ಯೋಚನೆ ಮಾಡಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ —ಮಾನ್ಯ ಅಧ್ಯಕ್ಷರೇ ಕೃಷಿ ಕಾರ್ಮಿಕರು ಎಂದರೆ ನಮ್ಮ ದೃಷ್ಟಿಯಲ್ಲಿ ವರ್ಗದೃಷ್ಟಿಯಲ್ಲಿ ನೋಡುವಂಥ ಜನ, ಅವರಲ್ಲಿ ೯೯ ಪರ್ಸೆಂಟ್ ಷೆಡ್ಯೂಲ್ ಕ್ಯಾಸ್ಟ್‌ನವರೇ, ಷೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿರತಕ್ಕಂಥವರೇ ಇರುತ್ತಾರೆ. ಅಂಥವರು ಬಂದರೆ ಬಹಳ ಅನುಕೂಲವಾಗುತ್ತದೆ. ೧೦ ಜನರು ಈಗ ಬೋರ್ಡ್‌ನಲ್ಲಿ ಏನು ಇದ್ದಾರೆ ಅವರ ಸಂಖ್ಯೆಯನ್ನು ಹೆಚ್ಚಿಸಿ ೧೨ ಜನರನ್ನು ಮಾಡಿ ಬೇಡವೆಂದು ಹೇಳುವುದಿಲ್ಲ.

ಶ್ರೀ॥ ಎ. ಲಕ್ಷ್ಮೀಸಾಗರ್.— ಬ್ಯಾಕ್‌ವರ್ಡ್ ಕ್ಲಾಸ್ ಮಹಿಳೆಯರಿಗೂ, ಷೆಡ್ಯೂಲ್ ಕ್ಯಾಸ್ಟ್ ಷೆಡ್ಯೂಲ್ ಟ್ರೈಬ್ಸ್‌ನವರಿಗೂ ಎಲ್ಲರಿಗೂ ಪ್ರಾತಿನಿಧ್ಯವಿದೆ. ಇಲ್ಲಿ ಪ್ರಾತಿನಿಧ್ಯ ಮುಖ್ಯವಲ್ಲ. ನಾನು ಹೇಳುವುದೇನೆಂದರೆ ಈ ಬಂದು ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸಿ ವರ್ಷಕ್ಕೆ ೧೦ ಕೇಸ್‌ಗಳನ್ನಾದರೂ ಹಿಡಿದು ಅವರಿಗೆ ಉಚಿತವಾದ ಕಾನೂನು ಸಹಾಯ ಮಾಡಬೇಕೆಂದು ಅವರನ್ನು ಕರೆದುಕೊಂಡು ಬರುತ್ತೇವೆಂದು ಮನೆ ಮನೆಗೂ ಹೋಗಿದ್ದೇವೆ. ಎಲ್ಲ ಸಂಘದ ಅಧ್ಯಕ್ಷರುಗಳನ್ನು ಮತ್ತು ಸೆಕ್ರೆಟರಿಗಳನ್ನು ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಕರೆಯಿಸಿ ಭಾಷಣ ಮಾಡಿ ಅವರನ್ನು ಮನವಿ ಮಾಡಿದ್ದೇವೆ. ಹಣದ ಕೊರತೆ ಇಲ್ಲವೆಂದೂ ಹೇಳಿದ್ದೇವೆ. ಆದ್ದರಿಂದ ಮಾನ್ಯ ಯಡಿಯೂರಪ್ಪನವರು ಏನು ಹೇಳಿದ್ದಾರೆ ಅದನ್ನು ಹೇಳುವುದಕ್ಕೆ ಅವರಿಗೆ ಅಧಿಕಾರವಿದೆ. ಅವರು ಹೇಳಿದಕ್ಕಾಗಿ ಯಾರನ್ನೋ ಒಬ್ಬರನ್ನು ಪ್ರೀತಿಮಾಡುವುದಕ್ಕಾಗಲಿ, ಮನ ಒಲಿಸುವುದಕ್ಕಾಗಲಿ ಮಾಡಿದಂಥದ್ದಲ್ಲ. ಅಗ್ರಿಕಲ್ಚರ್ ಲೇಬರ್‌ಗಳಿಗೆ ಪ್ರತ್ಯೇಕವಾದ ಕಾನೂನು ಇಲ್ಲದಿರುವುದರಿಂದ ಇರತಕ್ಕ ಕಾನೂನಿನೊಳಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಪ್ರತ್ಯೇಕವಾಗಿ ಅವರಿಗೆ ಕಾನೂನಿನ ನೆರವನ್ನು ಪುಕ್ಕಟೆ ಕೊಡುವುದು ಬೇಡ ಎನ್ನುವ ಅರ್ಥ ಬರುವಹಾಗೆ ಕಾನೂನನ್ನು ತಿದ್ದುಪಡಿಮಾಡಿದ್ದೇವೆ. ಮಾನ್ಯ ಯಡಿಯೂರಪ್ಪನವರೇ ಸ್ವಲ್ಪ ಕೇಳಿ. ನೀವು ತಿಳಿದುಕೊಂಡಿರುವುದೇ ಜಾಸ್ತಿ ಎಂದೂ ತಿಳಿದುಕೊಳ್ಳಬೇಡಿ. ಮಂಳೆ ಇಲ್ಲದೆ ಕಷ್ಟಕ್ಕೆ ತುತ್ತಾಗಿರತಕ್ಕಂಥ ಜಾಗಗಳು ಇವೆ, ಎರಡು ತಿಂಗಳು ಜೈಲಿನಲ್ಲಿದ್ದರೆ ಕಷ್ಟ ಎಂದು ಹೇಳುವುದಲ್ಲ. ಒಂದುವಾರ ಅಲ್ಲಿದ್ದಾಗ ಹೇಗೆ ಇರುತ್ತದೆ ಎನ್ನುವುದು ಗೊತ್ತಾಗುತ್ತದೆ. ಜೈಲಿನ ಮೇಲುಗಡೆ ನೋಡಿದರೆ ಗೋಡೆ ಕಾಣಿಸುತ್ತದೆ ಆದ್ದರಿಂದ ಸಹಾಯ ಮಾಡೋಣ. ಆದರೆ ಇದರ ಮುಖ್ಯ ಉದ್ದೇಶವೇನೆಂದರೆ ಉಚಿತ ಕಾನೂನಿನ ನೆರವನ್ನು ಯಾರು ಪಡೆಯುವುದಕ್ಕೆ ಅರ್ಹರಿರುತ್ತಾರೆ ಅಂಥವರಿಗೆ ಕಾನೂನಿನ ನೆರವನ್ನು ಪಡೆಯುವುದಕ್ಕೆ ಸಹಾಯ ಮಾಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಹಿಂದೆಯೂ ಕೂಡ ಇದರ ಬಗ್ಗೆ ಮಾತನಾಡಿದ್ದೇವೆ. ತಮ್ಮ ಪ್ರಕಾರ ಈಗಾಗಲೇ ಮಹಿಳೆಯರಿಗೆ ಹಿಂದುಳಿದ ವರ್ಗದವರಿಗೆ, ಹರಿಜನ ಗಿರಿಜನರಿಗೆ ಪ್ರಾಶಸ್ತ್ಯ ಸಿಕ್ಕುತ್ತದೆ ಎಂದು ಹೇಳಿದಾಗ, ಬಡತನದಲ್ಲಿ ಇರತಕ್ಕಂಥವರನ್ನು ಕಮಿಟಿಯಲ್ಲಿ ತೆಗೆದುಕೊಂಡರೆ ಅಲ್ಪ ಸ್ವಲ್ಪ ಸಹಾಯವಾಗುತ್ತದೆ. ಆದು ಇನ್ನೂ ಹೆಚ್ಚಿಗೆ ಆದರೆ ಅಲ್ಲಿರತಕ್ಕಂಥ ಲೋಪದೋಷಗಳು ಸರಿಯಾಗಬಹುದು. ಅಗ್ರಿಕಲ್ಚರ್ ಲೇಬರ್ ಎಂದರೆ ಏನು ? ಅಗ್ರಿಕಲ್ಚರ್ ಲೇಬರ್ ಏನ್ನುವುದಕ್ಕೆ ಡೆಫನೇಷನ್ ಏನು ? ತಮಗೆ ಖುಷಿ ಬರತಕ್ಕಂಥ ವ್ಯಕ್ತಿಯನ್ನು ನೇಮಕ ಮಾಡಿಕೊಳ್ಳುವುದಲ್ಲ. ನಿಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಯಾರು ಯಾರು ಅಗ್ರಿಕಲ್ಚರ್ ಲೇಬರ್ ಎನ್ನುವುದಕ್ಕೆ ಪಟ್ಟಿ ಇದೆ. ಆ ಬಂದು ಆಧಾರದ ಮೇಲೆ ಅಲ್ಲಿರತಕ್ಕಂಥ ವ್ಯಕ್ತಿಯನ್ನು ಉಪಯೋಗ ಮಾಡಿಕೊಳ್ಳುತ್ತೇವೆಂದು

ಯಾರನ್ನು ಬೇಕಾದರೂ ಅಗ್ರಿಕಲ್ಚರ್ ಲೇಬರ್ ಎಂದು ಹೇಳಬಹುದು. ಇದು ನಿಮ್ಮ ಮೂಲ ಉದ್ದೇಶ ಸ್ಪಷ್ಟವಾಗಿದೆ. ಅಗ್ರಿಕಲ್ಚರ್ ಲೇಬರ್ ಎನ್ನುವುದಕ್ಕೆ ವ್ಯಾಖ್ಯಾನ ಡೆಫಿನೇಷನ್ ಏನು ?

3-00 ಪಿ.ಎಂ.

ಯಾರನ್ನು ತರಬೇಕು ಅಂಥ ಇದ್ದೀರಿ ? ಅಲ್ಲಿರುವಂಥ ತಹಶೀಲ್ದಾರ್, ಅಸಿಸ್ಟೆಂಟ್ ಕಮಿಷನರ್ ಅಥವಾ ಡೆಪ್ಯೂಟಿ ಕಮೀಷನರ್‌ಗೆ ಬಿಡುತ್ತೀರಾ? ಅಥವಾ ಶಾಸಕರಿಗೆ ಏನಾದರೂ ಸ್ವಾತಂತ್ರ್ಯ ಇದೆಯೇ? ಅಧಿಕಾರ ವಿಕೇಂದ್ರೀಕರಣದ ಹೆಸರು ಹೇಳಿ ಎಲ್ಲಾ ಕೆಲಸವನ್ನು ಕೇಂದ್ರೀಕರಣ ಮಾಡುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್—ಶಾಸಕರು ಇದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಶಾಸಕ ಸದಸ್ಯರಿಗೆ ಏನಿದೆ ಅಧಿಕಾರ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರಿಗೆ ನಾನು ಪೂರಕವಾಗಿ ಹೇಳುತ್ತೇನೆ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಆಡಿದ ಮಾತಿನ ಅರ್ಥವನ್ನು ನಾನು ಶಿಥಿದು ಕೊಳ್ಳಬೇಕಾಗಿದೆ. ಅವರು ಆಡಿದ ಶಬ್ದವನ್ನು ನೋಡಿದರೆ ಭಯ ಮತ್ತು ಶಂಕೆಯ ಅರ್ಥ ಇದೆ. You have said 'one shall be a representative of agricultural labour. A representative may be even an M.L.A. Even a land lord could be a representative of agricultural labour. Suppose a land lord is a president.

ಶ್ರೀ ಎ. ಲಕ್ಷ್ಮೀಸಾಗರ್.—ಅಗ್ರಿಕಲ್ಚರಲ್ ಲೇಬರರ್, ಲ್ಯಾಂಡ್ ಲಾರ್ಡ್ ಆಗುವುದಿಲ್ಲ. Where is a land lord a President of the Agricultural, Labourers Association? It does not happen.

SRI M. VEERAPPA MOILY.—Why not ? ಮಾಡಬಹುದು. If he is a president of the Agricultural Labourers' Association, he will represent the labourers, ದಯವಿಟ್ಟು ಅರ್ಥ ಮಾಡಿಕೊಳ್ಳಿ. ಅದರ ಬದಲು 'any representative of agricultural labourers' ಅಂದರೆ ಏನು ಅರ್ಥವಾಗುತ್ತದೆ? "He must be a member from the agricultural labour family" ಇಷ್ಟು ಮಾಡಿದರೆ ಯಾವ ಅಪಾರ್ಥಕ್ಕೂ ಅವಕಾಶವಾಗುವುದಿಲ್ಲ.

ಶ್ರೀ ಯು. ಭೂಪತಿ.—ಶ್ರೀ ರೇವಣಸಿದ್ದಯ್ಯನವರನ್ನು ರೆಪ್ರಸೆಂಟೇಟೀವ್ ಆಗಿ ಮಾಡಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಲ್ಯಾಂಡ್ ಲಾರ್ಡ್ ಅಲ್ಲದೆ ರೈತ ಕಾರ್ಮಿಕ ಸಂಘದ ಅಧ್ಯಕ್ಷರು. ಆದ್ದರಿಂದ ಅವರನ್ನು ನಾಮಿನೇಟ್ ಮಾಡಬಹುದು. ಅದೇ ರೀತಿ ರುದ್ರಪ್ಪನವರನ್ನು ನಾಮಿನೇಟ್ ಮಾಡಬಹುದು. ಅವರು ಕೂಡ ರೈತ ಸಂಘವನ್ನು ಪ್ರತಿನಿಧಿಸುತ್ತಾರೆ. ಯಡಿಯೂರಪ್ಪನವರ ಶಂಕೆಗೆ ಸಂಪೂರ್ಣ ಅರ್ಥ ಇದೆ. ಆದರೆ ತಮ್ಮ ಅರ್ಥ ಇದು ಆಗಿರಲಿಕ್ಕೆ ಇಲ್ಲ, ತಮ್ಮ ಸರ್ಕಾರದ ಉದ್ದೇಶ ಅದಲ್ಲ. ಅಧಿಕಾರಿ ಋಷಿ ಬಂದಹಾಗೆ ಮಾಡಬಹುದು. ಆರ್ಬಿಟ್ರರಿಯಾಗಿ ಉಪಯೋಗಿಸಲಿಕ್ಕೆ ಸಾಧ್ಯವಿದೆ. So have it like this: "One from the agricultural labourer family" or "One shall be from the agricultural labour working class" or "One shall be from the class of agricultural labour" ಇಷ್ಟು ಮಾಡಿದರೆ ಯಾವ ಮಿಸ್‌ಯೂಸ್ ಆಗುವುದಿಲ್ಲ. ಇಲ್ಲದಿದ್ದರೆ ನಿಮ್ಮ ಸರ್ಪಸ್‌ಸರ್ವ್ ಆಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅವರ ಅಭಿಪ್ರಾಯ ಕೂಡ ಅದೇ ಇದೆ ಎಂದು ನಾನು ತಿಳಿದುಕೊಂಡಿದ್ದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಲಕ್ಷ್ಮೀಸಾಗರ್‌ರವರ ಕಳಕಳಿ, ಅವರ ಸದ್ಭಾವನೆ, ಮತ್ತು ಅವರು ಯಾವ ಉದ್ದೇಶದಿಂದ ಇದನ್ನು ಸೂಚಿಸಿದ್ದಾರೆ ಇದರ ಬಗ್ಗೆ ಯಾವುದೇ ಶಂಕೆ

ಇಲ್ಲ. ಆದರೆ ತಾವೇ ಮಾಡುತ್ತೀರೋ ಅಥವಾ ಅಧಿಕಾರಿಗಳು ಮಾಡುತ್ತಾರೋ ಬಿಡುತ್ತಾರೋ? ನಾಳೆ ದಿವಸ ನಾಮಿನೇಷನ್ ಮಾಡುವವರು ಯಾರು? ಆದ್ದರಿಂದ ಇದರ ಮೇಲೆ ಪ್ರೆಷ್ಚೆಗೆ ನಿಲ್ಲುವುದು ಬೇಡ. ನಿಲ್ಲದಿದ್ದರೆ ಇದರಿಂದ ಅನರ್ಥವಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ೪-೫ ವರ್ಷಗಳಿಂದ ನೋಡುತ್ತಿದ್ದೇನೆ. ತಿದ್ದುಪಡಿ ತರದಂತಹ ಸಂದರ್ಭದಲ್ಲಿ ಚರ್ಚಿಸುತ್ತೇವೆ: ನಿಲ್ಲದಿದ್ದರೆ ಇಲ್ಲ. ಈ ಕಡೆ ಸದಸ್ಯರು ಕೊಡೋವ ಸಲಹೆ ಕೂಡ ಜನರ ಹಿತದೃಷ್ಟಿಯಿಂದ ಇರುತ್ತದೆಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ನೀವು ಹೇಳಿದ್ದೇ ಸರಿ ಅನ್ನುವುದಾದರೆ ಪ್ರಿಸ್ಟೀಜ್ ದೃಷ್ಟಿಯಿಂದ ನಿಂತುಕೊಂಡ ಹಾಗೆ ಕಾಣುತ್ತದೆ. ಹತ್ತು ವರ್ಷದ ನಂತರ ತಪ್ಪು ಮಾಡಿದ್ದನ್ನು ಸರಿ ಮಾಡಿಕೊಳ್ಳುವುದಕ್ಕಿಂತ ಈಗಲೇ ವಿಚಾರ ಮಾಡುವುದು ಒಳ್ಳೆಯದು. ಅಲ್ಲದಿದ್ದರೆ ನಿಮ್ಮ ಉದ್ದೇಶ ಸರ್ವ್ ಆಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಮೊಯಿಲಿಯವರು ರೈಸ್ ಮಾಡಿದ ವಿಚಾರದ ಬಗ್ಗೆ ಕನ್‌ವಿನ್ಸ್ ಆಗಿದ್ದಾರೆಂದು ಭಾವಿಸಿದ್ದೇನೆ. ಬಹುಶಃ ಹೇಗೆ ಅಮೆಂಡ್‌ಮೆಂಟ್ ಮಾಡಬೇಕೆಂದು ಯೋಚಿಸುತ್ತಿರಬಹುದು. If you say 'one shall be a representative of agricultural labour, anybody can claim as agricultural labour representative. He can be nominated.

ಶ್ರೀ ಸಿದ್ದರಾಮಯ್ಯ.—ಅದೇ ಅರ್ಥ ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—"One shall be a representative from agricuetural labour" ಎಂದರೆ ಏನು ತಪ್ಪಾಗುತ್ತದೆ? ಅಸೋಸಿಯೇಷನ್ ಪ್ರೆಸಿಡೆಂಟಾಗಿದ್ದರೂ ಕೂಡ He is a representative. He can claim. ಅನೇಕ ಕಡೆ ಟ್ರೇಡ್ ಯೂನಿಯನ್‌ಗಳಲ್ಲಿ ಆತ ಪ್ರೊಫೆಷನ್‌ನಲ್ಲಿ ಇಲ್ಲದಿದ್ದರೂ ಕೂಡ ಅಧ್ಯಕ್ಷನಾಗಿರುತ್ತಾನೆ. ನಿಮ್ಮ ಆಬ್ಜೆಕ್ಷನ್ನಿನಲ್ಲಿ ಏನಿದೆ? "A representative form the category of agricultural labour is being includee" ಎಂದು ಇದೆ. ಆದರೆ ಕ್ಲಾಸ್‌ನಲ್ಲಿ ಮಾತ್ರ ಇದು ಬಂದಿಲ್ಲ. ಆದ್ದರಿಂದ ದಯವಿಟ್ಟು ಸ್ಪಷ್ಟವಾಗಿ ಇದು ಬರತಕ್ಕ ರೀತಿಯಲ್ಲಿ ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಅವರ ಅಭಿಪ್ರಾಯ ನನಗೆ ಅರ್ಥವಾಗಿದೆ. ಅಗ್ರಿಕಲ್ಚರಲ್ ಲೇಬರರ್ ಎಂದರೆ ಕಾರ್ಮಿಕವರ್ಗಕ್ಕೆ ಸೇರಿದವರನ್ನೇ ಸದಸ್ಯರನ್ನಾಗಿ ಮಾಡತಕ್ಕ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಲ್ಲ, ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಲ್ಪ ಕೇಳಿ ಸ್ವಾಮಿ. ಜಪಾಬ್ದಾರಿಯಿಂದ ಇದನ್ನು ಮಾಡಿದ್ದೇವೆ ನೀವು ಹೇಳಿದಂಥ ಅರ್ಥ ಇದರಲ್ಲಿ ಬರಂವುದಿಲ್ಲವೆಂಬುದು ನನಗೆ ವಂನಿದಟ್ಟಾಗಿದೆ ಅದನ್ನು ಯೋಚನೆ ಮಾಡಿಯೇ ಹಾಕಿದ್ದೇವೆ. ಮಾನ್ಯ ಕೃಷ್ಣನ್ ಅವರನ್ನೂ ಕೇಳಿದ್ದೇವೆ. ರೆಪ್ರಸೆಂಟೀವ್ ಆಫ್ ಅಗ್ರಿಕಲ್ಚರಲ್ ಲೇಬರರ್ ಎಂದರೆ ಅದಕ್ಕೆ etymological meaning, grammatical meaning ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ.

(ಗೊಂದಲ)

ಶ್ರೀ ಕೆ.ಎಚ್. ಪಾಟೀಲ್.—ತಾವು ನಮ್ಮ ಅಭಿಪ್ರಾಯವನ್ನು ಒಪ್ಪಿದ್ದೀರಿ ಅಂದರೆ ಸಂತೋಷ. "One shall be from amongst the agricultural labourers" ಎಂದು ಹಾಕಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸ್ವಲ್ಪ ದಯವಿಟ್ಟು ಸ್ವೀಕಾರ ಮಾಡತಕ್ಕ ಸೌಜನ್ಯ ತೋರಿಸಿದರೆ ಒಳ್ಳೆಯದು. Please be receptive.

ಶ್ರೀ ಎ. ಲಕ್ಷ್ಮೀಸಾಗರ್.—ಆ ರೀತಿ ಮಾತನಾಡಬೇಡಿ. ಪ್ರೆಸ್ಟೀಜ್ ಈ ರೀತಿ ಇಲ್ಲದೇ ಇರತಕ್ಕ ಶಬ್ದಗಳನ್ನು ಹೇಳಿಬೇಡಿ. ಅವರು ಹೇಳುವಾಗ ಏನು ಬೇಕಾದರೂ ಹೇಳಲಿ. ಆದರೆ ಸ್ವೀಕಾರ ಮಾಡತಕ್ಕೆ ಸೌಜನ್ಯ ತೋರಿಸಿ ಎಂದು ಹೇಳಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಏನು ಬೇಕಾದರೂ ಮಾತನಾಡವ್ದುದು ತಾವು "Be receptive" ಎಂದರೆ ಏನು ತಪ್ಪು?

ಶ್ರೀ ಎ. ಲಕ್ಷ್ಮೀಸಾಗರ್.—ಸದಸ್ಯರ ಅಭಿಪ್ರಾಯಗಳಿಗೆ ಮನ್ನಣೆ ಇಲ್ಲ ಎಂದು ಯಾರು ಹೇಳಿದ್ದಾರೆ ನಿಮಗೆ?

ಶ್ರೀ ಎಂ. ವೀರಪ್ಪ ಮೊಯಿಲಿ.—ಕುರುಡ ಹಿಡಿದದ್ದೇ ಬತ್ತಿ ಎಂದಂ ಹೇಳುವುದಕ್ಕಾಗುತ್ತದೆಯೆ?

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಆ ರೀತಿ ಹೇಳುವವರು?

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಆಬ್ಜೆಕ್ಟ್ಸ್ ಅಂಡ್ ರೀಸನ್ಸ್ ನೋಡಿದ್ದೀರಾ? Have you seen the statement of objects and seasons? No. you have never seen At least here it is nearer to the meaning. It is:—A representative from the Category of agricultural labour is being included as a member. This could have served the purpose. In the statement of objects and reasons it has been reflected. But in the Bill you have said "one shall be a representative of agricultural labour". It makes a vast difference. ನಾವು ಹೇಳುವುದನ್ನು ಹೇಳಿದ್ದೇವೆ. ಅವರಿಗೆ ಯಾರುಯಾರಿಗೋ ಖುಷಿ ಬಂದವರಿಗೆ ಕೊಡಬೇಕೆಂದಿದ್ದರೆ We cannot help it.

ಶ್ರೀ ಯು. ಭೂಪತಿ.—ಅಧ್ಯಕ್ಷರೇ, ಇದರಲ್ಲಿ ಅನೆಕ್ಷೆಗ್‌ನಲ್ಲಿ "One shall be a woman to represent an organisation of women connected with social welfare in the State" ಎಂದು ಹೇಳಿದ್ದಾರೆ, ಅಗ್ರಿಕಲ್ಚರಲ್ ರೆಪ್ರಸೆಂಟೇಟೀವ್ಸ್ ಬಗ್ಗೆ ವಾದವಿವಾದ ಈಗ ನಡೆಯುತ್ತು ಇದರಲ್ಲಿ "nine persons to be nominated by the Government" ಎಂದು ಇದೆ. ಇದರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ನವರನ್ನು ನಾಮಿನೇಟ್ ಮಾಡತಕ್ಕ ಸೂಚನೆ ಕಾಣುವುದಿಲ್ಲ. ಇದರ ಬಗ್ಗೆ ಪಂತ್ರಿಗಳು ಆಶ್ವಾಸನೆ ಕೊಡುತ್ತಾರೆಯೆ? ಅಗ್ರಿಕಲ್ಚರಲ್ ಲೇಬರರ್ಸ್ ಬಗ್ಗೆ ಮೊಯಿಲಿಯವರು ಹೇಳಿದ್ದುದು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಇದೆ. ಆ ಅರ್ಥಕ್ಕೆ ಹತ್ತಿರ ಇದೆ.

ಆದರೆ ಇಲ್ಲಿ ಹೇಳಿರತಕ್ಕಂಥದ್ದು ಸಂಪೂರ್ಣ ವ್ಯತ್ಯಾಸ ಇದೆ. ಅನುಭವಿಗಳು ಹೇಳತಕ್ಕ ಮಾತುಗಳಿಗೆ ಮನ್ನಣೆ ಕೊಡಬೇಕು ಮಾನ್ಯ ಮಂತ್ರಿಗಳು ಇದನ್ನು ಪ್ರಿಸ್ಟೀಜ್ ಆಗಿ ತೆಗೆದುಕೊಂಡಿದ್ದಾರೆಂಬುದಾಗಿ ನಮ್ಮಗಳಿಗೆ ಹೇಳಿ, ಅವರೇ ಪ್ರಿಸ್ಟೀಜ್ ಎಂದು ತಿಳಿದುಕೊಂಡು ಬಿಟ್ಟಿದ್ದಾರೆ. ಅವರು ಯಾವುದಕ್ಕೂ ಒಪ್ಪುವುದಕ್ಕಾಗುವುದಿಲ್ಲ, ಎಂದು ಹೇಳಿಬಿಡುತ್ತಾರೆ. ಅವರು ಹೇಳಿದ್ದೇ ಆಗಬೇಕು. ಇದರಲ್ಲಿ ದಯವಾಡಿ ಪ್ರಿಸ್ಟೀಜ್ ಎಂಬುದಾಗಿ ತೆಗೆದುಕೊಳ್ಳಬೇಡಿ. ಆ ದೃಷ್ಟಿಯಿಂದ ಯೋಚನೆ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ. ಎ. ಲಕ್ಷ್ಮೀಸಾಗರ್.—ನಾನು ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ ಅಂಡ್ ರೀಸನ್‌ನಲ್ಲಿ ವಿವರಣೆಯನ್ನು ಕೊಡುತ್ತೇವೆಯೇ ಹೊರತು, ಅದನ್ನು ಬಿಲ್ಲಿನಲ್ಲಿ ರಿಫ್ಲೆಕ್ಟ್ ಮಾಡುವುದಕ್ಕೆ ಬರುವುದಿಲ್ಲ. ಅಗ್ರಿಕಲ್ಚರಲ್ ಲೇಬರರ್ಸ್ ಅಂದರೆ ಕೃಷಿ ಕಾರ್ಮಿಕರಿಗೆ ಪ್ರಾತಿನಿಧ್ಯವನ್ನು ಕೊಡತಕ್ಕ ವಿಚಾರ ಇದರಲ್ಲಿದೆ. ಅದನ್ನು ಗವರ್ನಮೆಂಟ್‌ನಲ್ಲಿಟ್ಟುಕೊಂಡು ಇದನ್ನು ತಂದಿದ್ದೇವೆ. ಇದರಲ್ಲಿ ಲ್ಯಾಂಡೆಡ್ ಪರ್ಸನ್ಸ್‌ಗಳನ್ನು ಹಾಕುವುದಕ್ಕೆ ಬರುವುದಿಲ್ಲ. ನೋಡಿ ಯಾರು ಬಡವರು ಇದ್ದಾರೆ, ಯಾರು ಕೂಲಿಕಾರರು ಇದ್ದಾರೆ. ಅವರಿಗೆ ಕೊಡುತ್ತೇವೆಂದು ಹೇಳುತ್ತಿದ್ದೇನೆ. ಸನ್ಮಾನ್ಯ ಭೂಪತಿಯವರು ಮಾತನಾಡುತ್ತಾ, ನನ್ನನ್ನು ಕುರಿತು, ನಾನು ಹೇಳಿದ್ದೇ ಆಗಬೇಕು ಎಂಬುದಾಗಿ ಹೇಳಿದ್ದಾರೆ. ಆದೇ ರೀತಿ ಅವರು ಹೇಳಿದ್ದನ್ನೇ ನಾನು ಒಪ್ಪಿಕೊಳ್ಳಬೇಕೆಂದು ಏನೂ ಇಲ್ಲ. ಇಲ್ಲಿ ಪ್ರತಿಷ್ಠೆ ಏನೂ ಇಲ್ಲ. ಆದರೆ ಇಲ್ಲಿ ೯-೧೦ ಜನ ಇದ್ದಾರೆ ಎಂಬುದಾಗಿ ಹೇಳಿದ್ದಾರೆ; ಪೂರ್ತಿ ಒರಿಜಿನಲ್ ಕಾನೂನನ್ನು ತೆಗೆದು ನೋಡಬೇಕು. ಯಾರ್ಯಾರಿಗೆ ರೆಪ್ರೆಸಂಟೇಷನ್ ಇದೆ ಎಂಬುದು ಅದರಲ್ಲಿ ಇದೆ. ಅದನ್ನು ನೋಡಿ ಇಲ್ಲಿ ಮಾನ್ಯ ಸದಸ್ಯರು ತಮ್ಮ ಕಾಮೆಂಟ್ಸ್ ಅನ್ನು ಮಾಡಬೇಕಾಗುತ್ತದೆ. ಶ್ರೀಮಾನ್ ಮೊಯಿಲಿಯವರು ಹೇಳಿದ್ದುದು ಹೌಗೂ ಶ್ರೀಮಾನ್

ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದದನ್ನು ಗಮನದಲ್ಲಿಟ್ಟುಕೊಂಡಿದ್ದೇನೆ. ಅಗ್ರಿಕಲ್ಚರಲ್ ಲೇಬರರ್ಸ್, ಅದರಲ್ಲೂ ಲ್ಯಾಂಡ್‌ಲೆಸ್ ಲೇಬರರ್ಸ್...

ಅಧ್ಯಕ್ಷರು.—ಲ್ಯಾಂಡ್‌ಲೆಸ್ ಲೇಬರರ್ಸ್‌ನೋ ? ಅಥವಾ ಲಾಂಡ್ಡ್ ಲೇಬರರ್ಸ್‌ನೋ ?

ಶ್ರೀ ಎ. ಲಕ್ಷ್ಮೀಸಾಗರ್.—ಲ್ಯಾಂಡ್‌ಲೆಸ್ ಲೇಬರರ್ಸ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದಂ ಆಗುವುದಿಲ್ಲ. ಇವರು ಕಮಿಟ್ ಆಗಿದ್ದಾರೆ. ಅವರಿಗೆ ಪ್ರಾತಿನಿಧ್ಯವನ್ನು ಕೊಡುತ್ತಾರೆ. ಆ ವಿಚಾರ ಬೇರೆ. ನಾಳೆ ಇವರು ಬದಲಾವಣೆಯಾಗಿ ಮತ್ತೊಬ್ಬರು ಬಂದರೆ ಅವರು ಕಾನೂನನ್ನು ಓದಿ ಅದರಲ್ಲಿರುವಂತೆ ಮಾಡಿದರೆ, ಅಗ್ರಿಕಲ ರಲ್ ಲೇಬರರ್ಸ್‌ಗೆ ಪ್ರಾತಿನಿಧ್ಯ ಇಲ್ಲದಂತಾಗುತ್ತದೆ. ಹಿಂದೆ ಹೀಗೆ ಮಾಡಿತ್ತು ಎಂದು ಅವರಿಗೆ ಯಾರು ಹೇಳುತ್ತಾರೆ ?

ಅಧ್ಯಕ್ಷರು. —ಆಯಿತು ನೋಡೋಣ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾಡುವಾಗಲೇ ಸರಿಯಾಗಿ ನೋಡಿ ಏಕೆ ಮಾಡಬಾರದು ?

ಅಧ್ಯಕ್ಷರು.—ಈ ತಿದ್ದುಪಡಿಯನ್ನು ಈಗ ಪುತಕ್ಕೆ ಹಾಕುತ್ತೇನೆ.—

''ರೈರರನೇ ಇಸವಿಯ ಕರ್ನಾಟಕ ಕಾನೂನು ನೆರವು ಮಂಡಲಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—I am very sorry. ಇದಕ್ಕೆ ನಾವು ಒಪ್ಪುವುದಿಲ್ಲ. We press for a Division. ಇದನ್ನು ಮಾನ್ಯ ಮಂತ್ರಿಗಳು ಪ್ರಿಸ್ಟೀಜ್ ಮಾಡಿಕೊಂಡು ನಿಂತಿದ್ದಾರೆ.

ಅಧ್ಯಕ್ಷರು.—ವಿಧೇಯಕವನ್ನು ಖಂಡ ಖಂಡವಾಗಿ ಮಂತಕ್ಕೆ ಹಾಕುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲ ಇಲ್ಲ. ಇದಕ್ಕೆ ನಾವು ಒಪ್ಪುವುದಿಲ್ಲ. ತಾವೇ ಹೇಳಿ. ಇಷ್ಟು ಸಣ್ಣ ವಿಚಾರಕ್ಕೂ ಮಾನ್ಯ ಮಂತ್ರಿಗಳು ಪ್ರಿಸ್ಟೀಜ್ ಮಾಡಿಕೊಂಡು ಇದ್ದಾರೆ. We are pressing for division.

ಶ್ರೀ. ಎ. ಲಕ್ಷ್ಮೀಸಾಗರ್.—ಪ್ರಿಸ್ಟೀಜ್ ಮಾಡಿಕೊಂಡಿರುವವರು ಅವರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಷ್ಟೊಂದು ಮೊಂಡುತನ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ಹೇಳಿದ್ದಕ್ಕೆಲ್ಲಾ ಕೈ ಎತ್ತುವುದಕ್ಕಲ್ಲ ಇಲ್ಲಿ ನಾವು ಕುಳಿತಿರುವುದು. ಕೆಲವು ವಿಚಾರಗಳನ್ನು ಹೇಳಿದರೆ ಅದಕ್ಕೆ ಸರ್ಕಾರ ಒಪ್ಪಿಕೊಳ್ಳದಿದ್ದರೆ ಏನು ಮಾಡಬೇಕು ?

MR. SPEAKER.—If you are still pressing for division. I have no objection.

SRI M. MALLIKARJUN KHARGE. —We are pressing for division.

SRI B.S. YEDIYOORAPPA. —We are pressing, Sir.

(ಗೊಂದಲ)

ಶ್ರೀ. ಎ. ಲಕ್ಷ್ಮೀಸಾಗರ್.—ಸ್ವಲ್ಪ ಕೇಳಿ ಒಂದು ನಿಮಿಷ ಕೇಳಿ. ಬೇರೆ ತಿದ್ದುಪಡಿ ಕೂಡ ತರತಕ್ಕ ವ್ಯವಸ್ಥೆ ಇದೆ. ಆ ಸಮಯದಲ್ಲಿ ಇದನ್ನೂ ಕೂಡ ಗಮನದಲ್ಲಿಟ್ಟುಕೊಳ್ಳಲಾಗುವುದು.

ಶ್ರೀ ಕೆ.ಎಚ್. ಪಾಟೀಲ್.—ಈಗ ಏಕೆ ಆಗುವುದಿಲ್ಲ ? May I appeal to the Hon. Minister once again. It is not good to be so much adamant.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ಹಾಗಾದರೆ ಮತ್ತೆ ಇದನ್ನು ನಾಳೆ ತೆಗೆದುಕೊಂಡು ಬನ್ನಿ. ಇವತ್ತೇ ಆಗಬೇಕೆಂಬ ಅರ್ಜೆನ್ಸಿ ಏನು ಇದೆ ?

ಸಭೆಯನ್ನು ವಿಭಜಿಸಲಾಯಿತು

ಅಧ್ಯಕ್ಷರು.—ವಿಭಜಿಸಿದಾಗ ಫಲಿತಾಂಶ ಹೀಗಿದೆ.

೧. ಹೌದು — ೩೦

೨. ಇಲ್ಲ — ೧೫

ಸೂಚನೆಯು ''ಹೌದು'' ಎನ್ನುವುದರ ಪರವಾಗಿದೆ.

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

2ನೇ ಖಂಡ :—

ಅಧ್ಯಕ್ಷರು.—ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ಮೊದಲನೇ ಖಂಡ, ದೀರ್ಘ ಶೀರ್ಷಿ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ,

ಪ್ರಸ್ತಾವನ್ನು ಅಂಗೀಕರಿಸಲಾಯಿತು

(ಮೊದಲ ಖಂಡ ದೀರ್ಘ ಶೀರ್ಷಿ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—೧೯೮೮ನೇ ಇಸವಿ ಕರ್ನಾಟಕ ಕಾನೂನು ನೆರವು ಮಂಡಲಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''೧೯೮೮ನೇ ಇಸವಿ ಕರ್ನಾಟಕ ಕಾನೂನು ನೆರವು ಮಂಡಲಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.,,

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

೧೯೮೮ನೇ ಇಸವಿಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಶಾಸನದ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ.ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ೧೯೮೮ನೇ ಇಸವಿಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಶಾಸನದ (ತಿದ್ದುಪಡಿ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು